

# ಮಿಮಿ ಸಂಬಂಧಿಕರನ್ನು ಭೇಟಿಯಾಗುತ್ತಾಳೆ






ಮಿಮಿ ತನ್ನ ಹೊಸ ಮನೆಯಲ್ಲಿ ಹೊಂದಿಕೊಂಡ ನಂತರ, ಮಿಮಿಯು ಕುಟುಂಬದ ಇತರ ಸದಸ್ಯರನ್ನು ಭೇಟಿಯಾಗುವ ಸಮಯ ಬಂತೆಂದು ಅವಳ ಹೊಸ ಜಿರಾಫೆ ಅಮ್ಮ ಮತ್ತು ಅಪ್ಪ ನಿರ್ಧ-ರಿಸಿದರು. ಹಾಗಾಗಿ, ತಮ್ಮ ಸಂಬಂಧಿಕರನ್ನು ಅವರು ತಮ್ಮ ಮನೆಗೆ ಆಹ್ವಾನಿಸಿದರು. ಮಿಮಿಯ ಭೇಟಿಗೆ ತಮ್ಮ ಮನೆಗೆ ಬರುವಂತೆ ಕರೆಯಲು ಅಪ್ಪ ಅವರಿಗೆಲ್ಲಾ ಕರೆಮಾಡತೊಡಗಿದರು.



ಬಂಧುಗಳ ಬರುವಿಕೆಯಿಂದ ಮಿಸ್ಟರ್ ಮತ್ತು ಮಿಸೆಸ್ ಜಿರಾಫೆ ಮನೆಯನ್ನು ಶುದ್ಧಮಾಡಿ ಅಡುಗೆ ತಯಾರಿಸುತ್ತಿರುವಾಗ ಮಿಮಿಗೆ ಸ್ವಲ್ಪ ಚಿಂತೆಯಾಗತೊಡಗಿತು.

"ಅಮ್ಮ, ಅವರಿಗೆ ನಾನು ಬೇಡವಾದರೆ ಏನು ಮಾಡುವುದು?"ಎಂದು ಅವಳು ಕೇಳಿದಳು.

"ನೀನು ಎಷ್ಟು ನಮಗೆ ಪ್ರಿಯವಾಗಿದ್ದೀ ಹಾಗೂ ಎಲ್ಲರಂತೆ ನೀನೂ ನಮ್ಮ ಕುಟುಂಬದ ಒಂದು ಭಾಗವೆಂದು ನಾವು ಅವರಿಗೆ ತಿಳಿಸಿದ್ದೇವೆ," ಎಂದು ಅಮ್ಮ ಹೇಳಿದಳು.

ಮಿಮಿ ಕೇಳಿದಳು, "ಆದರೆ ಅವರು ನನ್ನನ್ನು ಇಷ್ಟಪಡದಿದ್ದರೆ ಏನು ಮಾಡುವುದು? ಅವರನ್ನು ಭೇಟಿ ಮಾಡಲು ನನಗೆ ಹೆದರಿಕೆ...."

"ಅವರು ನಿನ್ನನ್ನು ಇಷ್ಟಪಡುತ್ತಾರೆಂದು ನನ್ನ ಭಾವನೆ, ಸ್ವಲ್ಪ ಸಮಯ ನಿನ್ನೊಡನೆ ಒಟ್ಟಿಗೆ ಕಳೆದನಂತರ ಎಲ್ಲಾ ಸರಿಯಾಗುತ್ತದೆ" ಎಂದು ಅಪ್ಪ ಹೇಳಿದರು."ನೆನಪಿಡು ಜನರಿಗೆ ಒಬ್ಬರನ್ನೊಬ್ಬರು ತಿಳಿದುಕೊಳ್ಳಲು ಸ್ವಲ್ಪ ಸಮಯ ಹಿಡಿಯುತ್ತದೆ....ನೀನು ಇಲ್ಲಿಗೆ ಬಂದಾಗ ನಿನಗೆ ನನ್ನನ್ನು ಹಾಗೂ ಮಮ್ಮಿಯನ್ನು ಇಷ್ಟಪಡಲು ಸ್ವಲ್ಪ ಸಮಯ ತೆಗೆದುಕೊಂಡ ಹಾಗೆ, ಅವರು ನಿನ್ನನ್ನು ಭೇಟಿ ಮಾಡುತ್ತಾರೆ ಪರಿಚಯ ಮಾಡಿಕೊಳ್ಳುತ್ತಾರೆ ಎನ್ನುವುದೇ ನನಗೆ ಖುಷಿ ತರುತ್ತಿದೆ."



ಎಲ್ಲರೂ ಬರುವ ದಿನ ಮಿಮಿ ತನ್ನ ಮೆಚ್ಚಿನ ಹಳದಿ ಅಂಗಿಯನ್ನು ಧರಿಸಿದಳು.
ಸರಿಯಾಗಿ 12 ಗಂಟೆಗೆ, ಎಲ್ಲರೂ ಬರಲು ಪ್ರಾರಂಭಿಸಿದರು....ಅಜ್ಜಿ ತಾತ ಮೊದಲು ಬಂದರು.
ಅಪ್ಪ, "ಇದು ನಮ್ಮ ಮಗಳು, ಮಿಮಿ!"ಎಂದು ಪರಿಚಯ ಮಾಡಿಸಿದಾಗ ಮಿಮಿ ಹೆದರಿಕೊಂಡೇ ನಗು ತೋರಿಸಿದಳು.
"ಮಿಮಿ, ಇವರು ನಿನ್ನ ಅಜ್ಜಿತಾತಂದಿರು!"ಎಂದು ಮಮ್ಮಿ ಹೇಳಿದಳು.
"ನಾನು ನಿನಗೆ ಸ್ವಲ್ಪ ಕ್ಯಾರೆಟ್ ಕೇಕ್ ಮಾಡಿದ್ದೇನೆ" ಎಂದು ಅಜ್ಜಿ ಹೇಳಿದರು. "ನೀನು ಇಲ್ಲಿರುವುದು ನಮಗೆ ನಿಜಕ್ಕೂ ಖುಷಿಯಾಗಿದೆ," ಎಂದು ತಾತ ಅವಳ ತಲೆ ಸವರುತ್ತಾ ಹೇಳಿದರು.



ನಂತರ ಆಂಟಿ, ಅಂಕಲ್, ಸೋದರ ಸಂಬಂಧಿ ಬಂದರು.

ಅವರು ಅವಳಿಗೆ ಬಹುಮಾನಗಳನ್ನೂ ತಂದರು.

"ನೋಡು ಮಿಮಿ, ಇವರು ನಿನ್ನ ಸೋದರ ಸಂಬಂಧಿ...ಪಿಂಟೋ ಹಾಗೂ ಮಿಯ...ನಿನಗೆ ಆಡಲು ಹೊಸ ಜೊತೆಗಾರರು!"ಎಂದು ಅಮ್ಮ ಹೇಳಿದರು.

"ನಾವು ನಿನ್ನನ್ನು ಭೇಟಿಮಾಡಲು ಕಾಯುತ್ತಿದ್ದೆವು, ಮಿಮಿ!"ಎಂದು ಆಂಟಿಯರು ಬಹಳ ಪ್ರೀತಿಯಿಂದ ಹೇಳಿದರು.




ಅವಳ ಅಂಕಲ್ಗಳು ಅವಳನ್ನು ತಮ್ಮ ಬೆನ್ನ ಮೇಲೆ ಅವಳನ್ನು ಹೊರಿಸಿಕೊಂಡು ಸವಾರಿ ಮಾಡಿದರು.
"ಹೊಸ ಸೊಸೆಯು ಬಂದಿರುವುದು ನಮಗೆ ತುಂಬಾ ಮಜವಾಗಿದೆ!"ಎಂದು ಅವರು ಹೇಳಿದರು.
ಅವರು ಹೇಳಿದರು, "ಮಿಮಿ, ನಿನಗೆ ಗೊತ್ತಾ, ಒಂದು ಸರ್ಕಸ್ ಬರುತ್ತಿದೆ...ಮುಂದಿನ ವಾರ ನಾವೆಲ್ಲರೂ ಒಟ್ಟಿಗೆ ಅಲ್ಲಿಗೆ ಹೋಗೋಣ!"



ಎಲ್ಲರೂ ತುಂಬಾ ಒಳ್ಳೆಯವರಾಗಿ ಕಂಡರು.ಅವರು ನಿಜಕ್ಕೂ ನನ್ನನ್ನು ಇಷ್ಟಪಟ್ಟ ಹಾಗೆ ಕಾಣುತ್ತದೆ ಎಂದು ಮಿಮಿ ಸಂತೋಷದಿಂದ ಯೋಚಿಸಿದಳು.
ನಂತರ ಅವಳು ತನ್ನ ಹೊಸ ಕೋಣೆಗೆ ಕಸಿನ್ ಪಿಂಟೋ ಮತ್ತು ಮಿಯಾರನ್ನು ಕರೆದುಕೊಂಡು ಹೋಗಿ ತನ್ನ ಎಲ್ಲಾ ಆಟಿಕೆಗಳನ್ನು ಬಹಳ ಖುಷಿಯಿಂದ ತೋರಿಸಿದಳು.
ಮಿಮಿ ಕೇಳಿದಳು, "ನಿನಗೆ ಯಾವ ಆಟ ಆಡಬೇಕು?", "ನಾವು ಚೆಂಡಾಟ ಆಡೋಣವೇ ಅಥವಾ ಹೊರಗೆ ಕಣ್ಣಾಮುಚ್ಚಾಲೆ ಆಡಬೇಕೆಂದು ನಿಮಗೆ ಇಷ್ಟವೋ?"




"ನಾನು ನಿನ್ನೊಂದಿಗೆ ಯಾವ ಆಟವನ್ನೂ ಆಡುವುದಿಲ್ಲ-ಪಿಂಟೋ ಸಹಾ ಆಡುವುದಿಲ್ಲ", ಎಂದು ಮಿಯಾ ಕಟುವಾಗಿ ಹೇಳಿದಳು.

"ಯಾಕೆ ಆಡುವುದಿಲ್ಲ?"ಎಂದು ಮಿಮಿ ಆಶ್ಚರ್ಯದಿಂದ ಕೇಳಿದಳು.

"ಯಾಕೆಂದರೆ, ನೀನು ನಮಗಿಂತ ಬೇರೆ ತರಹ ಇದ್ದೀಯಾ-ನಾವು ಉದ್ದ ಇದ್ದೇವೆ ಮತ್ತು ನೀನು ಕುಳ್ಳಗಿದ್ದೀಯಾ-ನಿನಗೆ ವಿಚಿತ್ರವಾದ ಜೋಲುವ ಕಿವಿಗಳಿವೆ. ನೀನು ನಮ್ಮ ಕುಟುಂಬಕ್ಕೆ ಹೇಗೆ ಸೇರುತ್ತೀಯಾ?ನಮ್ಮ ಕುಟುಂಬದೊಂದಿಗೆ ಇರಲು ನಿನ್ನ ಪೋಷಕರು ನಿನ್ನನ್ನು ಯಾಕೆ ಕರೆತಂದರೆಂದು ನನಗೆ ತಿಳಿಯುವುದಿಲ್ಲ. ನಮಗೆ ನೀನು ಬೇಡ... ನೀನು ನಮ್ಮ ಕಸಿನ್ ಅಲ್ಲ", ಎಂದು ಅವಳು ಹೇಳಿದಳು. ಮಿಮಿ ಅಳಲು ಪ್ರಾರಂಭಿಸಿದಳು.




ಅದೇ ಹೊತ್ತಿಗೆ, ಅಜ್ಜಿ ಅವರಿದ್ದಲ್ಲಿಗೆ ಬಂದರು.
"ನಾನು ಕೇಳಿಸಿಕೊಂಡೆ ಮಿಯಾ....ಮಿಮಿಗೆ ಈ ರೀತಿ ಹೇಳುವುದು ಸರಿಯಾದದ್ದಲ್ಲ. ಅವಳಿಗೆ ಬೇಸರ ಉಂಟುಮಾಡಿದರೆ ಅವಳು ನಿಮ್ಮೊಂದಿಗೆ ಆಡುವುದಿಲ್ಲ. ನೀನು, ಪಿಂಟೋ ಮತ್ತು ನಾವೆಲ್ಲರೂ ಇರುವ ಹಾಗೆ ಮಿಮಿ ಕೂಡಾ ಖಂಡಿತವಾಗಿಯೂ ಈ ಕುಟುಂಬದ ಒಂದು ಭಾಗ."ಎಂದು ಅಜ್ಜಿ ಹೇಳಿದರು.



"ಯೋಚಿಸಬೇಡ, ಮಿಮಿ, ನೀನು ನಮ್ಮ ಸೋದರಿ," ಮಿಮಿಯ ಕೈಯನ್ನು ಹಿಡಿದುಕೊಳ್ಳುತ್ತಾ ಪಿಂಟೋ ಹೇಳಿದ.

"ಅವಳು ನಿನಗೆ ತಮಾಶೆ ಮಾಡಿ ನಿನ್ನನ್ನು ನೋಯಿಸಿದ್ದಾಳೆ ಎಂದು ನನಗೆ ಬೇಸರವಾಗುತ್ತಿದೆ...ಅವಳು ಹಾಗೆ ಮಾಡಬಾರದಿತ್ತು.ನೀನು ನಿಜವಾಗಿಯೂ ನಮ್ಮ ಕಸಿನ್ ಹಾಗೂ ಈ ಕುಟುಂಬದ ಒಂದು ಭಾಗ ಎಂದು ಅರ್ಥಮಾಡಿಕೊಳ್ಳಲು ಅವಳಿಗೆ ಸ್ವಲ್ಪ ಸಮಯ ಬೇಕಾಗಬಹುದು."




"ಮತ್ತು ನೀನು ನಮ್ಮ ಸೊಸೆ," ಎಂದು ಅವಳ ಅಂಕಲ್ ಹೇಳಿದರು.


"ನಾವು ಆಡಲು ಹಾಗೂ ಅವಳಿಗಾಗಿ ಅಡುಗೆ ಮಾಡಲು ಮತ್ತು ಪ್ರೀತಿಸಲು ಬಯಸುವ ನಮ್ಮ ಸೊಸೆ ಇವಳು" ಎಂದು ಆಂಟಿಯರು ಹೇಳಿದರು.



"ನಾನು ಹೆಮ್ಮೆ ಪಡುವ ನಮ್ಮ ಮೊಮ್ಮಗಳು," ಎಂದು ಅಜ್ಜ ಹೇಳಿದರು.
"ಮಿಯಾ ಹಾಗೂ ಪಿಂಟೋ ಬರುವಂತೆ ನೀನೂ ವಾರಾಂತ್ಯದಲ್ಲಿ ಹಾಗೂ ರಜಾದಿನಗಳಲ್ಲಿ ನಮ್ಮ ಮನೆಗೆ ಬರುತ್ತೀಯೆಂದು ನಾನು ಬಯಸುತ್ತೇನೆ" ಎಂದು ಅಜ್ಜಿ ಹೇಳಿದರು.



"ಎಲ್ಲರಿಗಿಂತ ಹೆಚ್ಚಾಗಿ, ಅವಳು ನಮ್ಮ ಮಗಳು ಹಾಗೂ ನಮಗೆ ಅವಳು ಬೇಕು," ಎಂದು ಮಮ್ಮಿ ಹಾಗೂ ಡ್ಯಾಡಿ ಹೇಳಿದರು.
ಹೀಗೆ ಮಿಮಿಗೆ ಸಮಾಧಾನವಾಯಿತು.



ಸ್ವಲ್ಪ ಹೊತ್ತಿನ ನಂತರ ಮಿಯಾ ಹೇಳಿದಳು, "ಕ್ಷಮಿಸು/ಸಾರಿ ಮಿಮಿ, ನಿನಗೆ ಬೇಸರ ಮಾಡಿದ್ದಕ್ಕೆ", "ನನಗೆ ನಿಜವಾಗಿಯೂ ನೀನು ನಮ್ಮ ಕಸಿನ್ ಆಗಬೇಕೆಂದು ಇಷ್ಟ.ನೀನು ಮುಂದಿನ ವಾರಾಂತ್ಯದಲ್ಲಿ ನಮ್ಮಲ್ಲಿಗೆ ಬಂದು, ಪಿಂಟೋ ಹಾಗೂ ನನ್ನೊಂದಿಗೆ ಆಡುತ್ತೀಯಾ?

ಮಿಮಿ ಸಂತೋಷದಿಂದ ಹೇಳಿದಳು, "ನನಗೆ ಅದು ಇಷ್ಟ", "ನಾನು ನಿಮಗೆ ಮಿಸೆಸ್ ಬೇರ್ ಮನೆಯಲ್ಲಿ ಕಲಿತ ಕೆಲವು ಆಟಗಳನ್ನು ಕಲಿಸುತ್ತೇನೆ!"

ಮಿಮಿಗೆ ತನ್ನ ಡ್ಯಾಡಿ ಕಳೆದ ವಾರದಲ್ಲಿ ಹೇಳಿದ್ದು ನೆನಪಿಗೆ ಬಂದಿತು- ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳಲು ಹಾಗೂ ಇಷ್ಟಪಡಲು ಎಲ್ಲರಿಗೂ ಸ್ವಲ್ಪ ಸಮಯ ಬೇಕಾಗುತ್ತದೆ ಎಂದು.

ಅವಳು ಅಮ್ಮ ಮತ್ತು ಅಪ್ಪನನ್ನು ಪರಿಚಯ ಮಾಡಿಕೊಂಡು ಪ್ರೀತಿ ಮಾಡಲು ಸಮಯ ತೆಗೆದುಕೊಂಡ ಹಾಗೆ-ಒಂದು ಕುಟುಂಬವನ್ನು  ಅರ್ಥಮಾಡಿಕೊಳ್ಳುವಾಗ ಸ್ವಲ್ಪ ಕಾಲ ಬೇಕಾಗುತ್ತದೆ.

ಸಮುದಾಯ ಮಕ್ಕಳ ಮತ್ತು ಹದಿಹರೆಯದವರ ಮಾನಸಿಕ ಆರೋಗ್ಯ ಸೇವೆಗಳ
ಯೋಜನೆ,
ಮಕ್ಕಳ ಮತ್ತು ಹದಿಹರೆಯದವರ ಮನೋವೈದ್ಯಶಾಸ್ತ್ರ ಇಲಾಖೆ,
ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನಗಳ ರಾಷ್ಟ್ರೀಯ ಸಂಸ್ಥೆ (ನಿಮ್ಹಾನ್ಸ್)
(ರಾಷ್ಟ್ರೀಯ ಪ್ರಾಮುಖ್ಯತೆಯ ಸಂಸ್ಥೆ)
ಹೊಸೂರು ರಸ್ತೆ, ಬೆಂಗಳೂರು-560029
**Website:www.nimhans.ac.in**
**Email :capnimhans@gmail.com**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರದ ನೆರವಿನೊಂದಿಗೆ

ವಿನ್ಯಾಸ ಮತ್ತು ಕಲೆ: ಸತೀಶ್ ರಾಮ್